ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ

ಸಿ ಸಿ ನಂಃ 120/2025

ದಿನಾಂಕ **10.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟಿ ಸವಾಲು ಆರೋಪಿತರ ಪರ ಶ್ರೀ ವಕೀಲರಿಂದಃ

ಆರೋಪಿ ಹಣ ಕೇಳಿದಾಗ ಮಧ್ಯಾಹ್ನ 2 ಗಂಟೆ ಆಗಿತ್ತು. ಯಾವ ದಿನ ಎಂದು ನನಗೆ ಗೊತ್ತಿಲ್ಲ. ಆರೋಪಿ 6 ಲಕ್ಷ ಬೇಕು ಎಂದು ಕೇಳಿದರು. ನಾನು ಅದೇ ದಿನ ಹಣವನ್ನು ಕೊಟ್ಟಿರುತ್ತೇನೆ. ಹಣ ನೀಡಿದಾಗ ಮಧಾ್ಯಹ್ನ 2 ಗಂಟೆ ಆಗಿತ್ತು. ಹಣವನ್ನು ನನ್ನ ಮನೆಗೆ ಬಂದು ಕೇಳಿದರು. ಆ ಸಮಯದಲ್ಲಿ ನಾನು ಒಬ್ಬಳೆ ಮನೆಯಲ್ಲಿದ್ದೆ. ಅಷ್ಟು ಹಣವನ್ನು ನಾನು ಮನೆಯಿಲ್ಲೆ ಇಟ್ಟಿದ್ದೆ. ನನ್ನ ಕೆಲಸ ಮಾಡುತ್ತಿದ್ದ ಕಾರಣ ನಾನು ಹಣವನ್ನು ಕೂಡಿ ಇಟ್ಟಿದ್ದೆ. ನನ್ನ ಗಂಡ ಹಣವನ್ನು ತಂದು ಕೊಟ್ಟಾಗ ಕೂಡಿ ಇಟ್ಟಿದ್ದೆ. ಆ ದಿನ ಬಡ್ಡಿ ಕೊಡುವ ಬಗ್ಗೆ ಮಾತುಕತೆ ಅಗಿಲ್ಲ. ಈ ಮೊದಲು ನನಗೂ ಆರೋಪಿಗೂ ಬೇರೆ ಯಾವುದೇ ಹಣಕಾಸು ವ್ಯವಹಾರ ನಡೆದಿಲ್ಲ. ಆರೋಪಿಗೆ ಏನು ಆಸ್ತಿ ಇದೆ ಎಂದು ತಿಳಿದುಕೊಂಡಿಲ್ಲ. ಅದೇ ರೀತಿ ಆರೋಪಿಯ ಕುಟುಂಬದ ಆದಾಯವನ್ನು ತಿಳಿದುಕೊಂಡಿಲ್ಲ. ವಾಪಸ್ಸು ಯಾವ ರೀತಿ ಮರುಪಾವತಿತಿ ಎಂದು ಮಾತುಕತೆ ಆಗಿಲ್ಲ. ಯಾವ ಕಾರಣಕ್ಕೆ ಆರೋಪಿ ಗೆ ಹಣ ಬೇಕೆಂದು ನಾನು ತಿಳಿದುಕೊಂಡಿಲ್ಲ. ಆರೋಪಿಯ ದರ್ದಿಗಾಗಿ ಹಣ ಬೇಕು ಎಂದು ಹೇಳಿದರು ಎಂದು ತಿಳಿಸಿದರು. 6 ತಿಂಗಳ ಒಳಗೆ ಹಣ ಪಾವತಿ ಮಾಡುತ್ತೆವೇ ಎಂದು ಹೇಳಿದರು . ನಾನು ಹಣ ಕೊಟ್ಟ ಸಮಯದಲ್ಲಿ ಆರೋಪಿ ನನಗೆ ಚೆಕ್ಕನ್ನು ಕೊಟ್ಟರು. ಆರೋಪಿ ನನ್ನಲ್ಲಿ ಯಾವುದೇ ಸಾಲ ಕೇಳಿಲ್ಲ ನಾನು ಹೇಳಿದ ರೀತಿಯಲ್ಲಿ ಯಾವುದೇ ಹಣವನ್ನು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ವಾಪಸ್ಸು ಕೇಳಿರುತ್ತೇನೆಂದು ಹೇಳಲು ಆಗುವುದಿಲ್ಲ. ಆರೋಪಿ ನನ್ನ ಮನೆಗೆ ಬಂದು ವಾಪಸ್ಸು ಕೊಡುತ್ತೇನೆಂದು ಹೇಳಿದರು. ಯಾವ ದಿನಾಂಕದಂದು ಬಂದು ಹೇಳಿದರು ಎಂದು ನೆನಪಿಲ್ಲ. ಒಂದು ವಾರದೊಳಗೆ ವಾಪಸ್ಸು ನೀಡುತ್ತೇನೆ ಎಂದು ಹೇಳಿದರು . ವಾಪಸ್ಸು ಒಂದು ವಾರ

ಒಳಗೆ ನೀಡಿಲ್ಲ. ಯಾವ ದಿನಾಂಕದಂದು ಪುನಃ ಕೇಳಿದೆನು ಎಂದು ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ಯಾರು ಇರಲ್ಲಿಲ. ಚೆಕ್ಕನ್ನು ಬಿಟ್ಟು ಬೇರೆ ದಾಖಲೆಯನ್ನು ಕೊಡಲು ನಾನು ಕೇಳಿಲ್ಲ. ನನ್ನ ಗಂಡ ಕೆಲಸ ಮಾಡುವ ಬಗ್ಗೆ ದಾಖಲೆಗಳನ್ನು ನೀಡಿಲ್ಲ. ನನ್ನ ಗಂಡನಿಗೆ ತಿಂಗಳಿಗೆ 15 ಸಾವಿರ ಸಂಬಳ ಬರುವ ಬಗ್ಗೆ ದಾಖಲೆ ನೀಡಿಲ್ಲ. ಈಗ ನಾನು ನೋಡುತ್ತಿರುವ ದಾಖಲೆ ನನ್ನ ಬ್ಯಾಂಕ್ ಖಾತೆಗೆ ಸಂಬಂದಿಸಿದ್ದು ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ್ದರಿಂದ ಆರೋಪಿ ಪರ ನಿಡಿ 1 ಎಂದು ಗುರುತಿಸಲಾಯಿತು. ನಾನು ಆರ್ ಬಿ ಎಲ್ ಬ್ಯಾಂಕಿನಲ್ಲಿ ದಿಃ 27.06.2024 ರಂದು 50 ಸಾವಿರ ಹಣ ಸಾಲ ಪಡೆದಿರುತ್ತೇನೆ ಎಂದರೆ ಸರಿ. ನಾನು ಗುಂಪು ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿ. ನಮ್ಮ ತಂಡದ ಹೆಸರು ಕುಂಬಾರ ಕಾಲೋನಿ ತಂಡ ಎಂದರೆ ಸರಿ. ಮೈಕ್ರೊ ಫೈನಾನ್ಸ್ ರವರು ತಿಂಗಳಿಗೆ ಒಂದು ಸಲ ಬಂದು ಎಲ್ಲರು ಸೇರಿದ ಜಾಗದಲ್ಲಿ ಸಾಲ ವಸೂಲಾತಿ ಮಾಡುತ್ತಾರೆ ಎಂದರೆ ಸರಿ. Bharath Finance inclusion limited ಎಂಬ ಸಂಸ್ಥೆಯಲ್ಲಿ ನಾನು ಸದಸ್ಯರು ಎಂದರೆ ಸರಿಯಲ್ಲ. ಆ ಸಂಸ್ಥೆಯ ಸದಸ್ಯರಾದ ನಾಗಮ್ಮ ಪದ್ಮ ರಾಧ ಉಷಾ ಎಲ್ಲಾರು ನನಗೆ ಪರಿಚಯ ಎಂದರೆ ಸರಿಯಲ್ಲ. ನಾನು Bellstar Micro finance ಅಲ್ಲಿ ಸದಸ್ಯರು ಎಂದರೆ ಸರಿ. ಅಲ್ಲೂ ಸಹ ನಾನು 50 ಸಾವಿರ ಹಣ ಸಾಲ ಪಡೆದಿರುತ್ತೇನೆ ಎಂದರೆ ಸರಿ. ಆ ಸಾಲದ ದಿಃ 17.07.2024 ಎಂದರೆ ಸರಿ. Micro finance ಅಲ್ಲಿ ಆರೋಪಿ ಉಷಾ ಸದಸ್ಯರು ಎಂದರೆ ಸರಿ. ಅದೇ ರೀತಿ Esaaf Micro finance ಅಲ್ಲಿ ಸಾಲ ಪಡೆದಿರುತ್ತೇನೆ ಎಂದರೆ ಸರಿ. ನಾನು ಈ ರೀತಿ ಸಂಸ್ಥೆಯಲ್ಲಿ ಮುಖ್ಯಸ್ಥರಾದ ಕಾರಣ ಆ ಸಂಸ್ಥೆಗಳ ಸಾಲಗಳಿಗ ಸಂಬಂದಿಸಿದಂತೆ ನಾನು ತಂಡದ ಪ್ರತಿನಿಧಿಯಾದ ಕಾರಣ ಆರೋಪಿ ಖಾಲಿ ಚೆಕ್ಕನ್ನು ತಂಡದ ಸಾಲದ ಭದ್ರತೆಗಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಚೆಕ್ಕನ್ನು ದುರಪಯೋಗ ಪಡಿಸಿಕೊಂಡು ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಹಲವಾರು ಸಂಸ್ಥಗಳಲ್ಲಿ ಸಾಲ ಪಡೆದು ಸಾಲಗಾರಳಾಗಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಸಾಲಗಾರಳಾದ ಕಾರಣ ನಾನು ಆರೋಪಿ ಗೆ ಸಾಲ ಕೊಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟಿ ಸವಾಲಿಗೆ ಕಾಲವಕಾಶ ಕೇಳಲಾಯಿತು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.